# ಲೇಡೀಸ್ ಫಸ್ಟ್!

**ಬಾಲಿವುಡ್‌ನಲ್ಲೀಗ ಮಹಿಳಾ ನಿರ್ದೇಶಕಿಯರ ದೊಡ್ಡ ದಂಡೇ ಎದ್ದು ನಿಂತಿದೆ!**


ಫರ್ಹಾ ಖಾನ್

ಬಾಲಿವುಡ್‌ನಲ್ಲೀಗ 'ಪ್ರಮೀಳಾ ರಾಜ್ಯ' ನಿರ್ಮಾಣವಾಗಿದೆ. ಇಲ್ಲಿಯವರೆಗೆ ನಿರ್ದೇಶಕರು ಹೇಳಿದ್ದಕ್ಕೆ ತಲೆಯಾಡಿಸಿ ಕುಣಿಯಲಷ್ಟೇ ಸೀಮಿತವಾಗಿದ್ದ ಮಹಿಳೆಯರು (ಒಂದೆರಡು ಅಪವಾದಗಳಿರಬಹುದು) ಇದೀಗ ಹೆಚ್ಚಿನ ಸಂಖ್ಯೆಯಲ್ಲಿ ನಿರ್ದೇಶಕಿಯರಾಗಿ ಹೀರೋಗಳನ್ನೇ ಕುಣಿಸತೊಡಗಿದ್ದಾರೆ. ಬಾಲಿವುಡ್‌ನಲ್ಲಿ ಮಹಿಳಾ ನಿರ್ದೇಶಕಿಯರ ಸಂಖ್ಯೆ ಒಮ್ಮಿಂದೊಮ್ಮೆಲೆ ಏರಿದೆ. ಜತೆಗೆ ಮಸಾಲಾ ಚಿತ್ರಗಳ ನಿರ್ದೇಶನಕ್ಕೂ ಮಹಿಳೆಯರು ಸೈ ಎಂಬ ಹೊಸ ಟ್ರೆಂಡ್ ಶುರುವಾಗಿದೆ.

ಹಿಂದೆಲ್ಲ ಮೀರಾ ನಾಯರ್ ಆಗೊಮ್ಮೆ ಈಗೊಮ್ಮೆ ಸದ್ದು ಮಾಡುತ್ತಿದ್ದುದುಂಟು. ಹೇಮಾಮಾಲಿನಿ ಒಂದು ಚಿತ್ರ ನಿರ್ದೇಶಿಸಿದ್ದುಂಟು. ಆದರೆ ಈಗ ಹಾಗಲ್ಲ; ಯಶಸ್ವೀ ಮಹಿಳಾ ನಿರ್ದೇಶಕಿಯರ ದಂಡೇ ಸಿದ್ಧವಾಗಿದೆ. ಘಟಾನುಘಟಿ ನಿರ್ಮಾಪಕರೂ ಈ ಮಹಿಳೆಯರ ಚಿತ್ರಗಳಿಗೆ ದುಡ್ಡು ಸುರಿಯಲು ಸಿದ್ಧರಾಗಿ ನಿಂತಿದ್ದಾರೆ.

ರಾಜಶ್ರೀ ಓಝಾ ನಿರ್ದೇಶಿಸಿದ 'ಆಯಿಷಾ' ಪ್ರೇಕ್ಷಕರ ಹಾಗೂ ವಿಮರ್ಶಕರ ಮೆಚ್ಚುಗೆ ಗಳಿಸಿದ್ದು ಮೊದಲ ಸಿಹಿ ಸುದ್ದಿ. ಅದರ ಬೆನ್ನಲ್ಲೆ ಅನೂಷಾ ರಿಜ್ವಿ ನಿರ್ದೇಶಿಸಿದ 'ಪೀಪ್ಲಿ ಲೈವ್' ಬಾಕ್ಸ್ ಆಫೀಸಿನಲ್ಲಿ ಯಶಸ್ವಿಯಾಗಿದೆ. ಇದೀಗ ಅಮೀರ್ ಖಾನ್‌ನ ಮಡದಿ ಕಿರಣ್ ರಾವ್ ನಿರ್ದೇಶಿಸಿದ 'ದೋಭಿ ಘಾಟ್' ತೆರೆಗೆ ಬರಲು ಸಿದ್ಧವಾಗಿದೆ. ಈ ಮಧ್ಯೆ ಜೋಯಾ ಅಖ್ತರ್ 'ಜಿಂದಗಿ ಮಿಲೇಗಿ ನ ದುಬಾರಾ' ಎಂಬ ಎರಡನೆ ಚಿತ್ರದಲ್ಲಿ ಬ್ಯುಸಿ ಆಗಿದ್ದಾರೆ. ಮೆಗಾಸ್ಟಾರ್ ಹೃತಿಕ್ ರೋಶನ್‌ನನ್ನೇ ಈ ಚಿತ್ರದಲ್ಲಿ ಅಖ್ತರ್ ನಿರ್ದೇಶಿಸುತ್ತಿದ್ದಾರೆ. 'ಶಬ್ದ್' ಚಿತ್ರದ ನಿರ್ದೇಶಕಿ ಲೀನಾ ಯಾದವ್, 'ಹನಿಮೂನ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್' ಚಿತ್ರದ ನಿರ್ದೇಶಕಿ ರೀಮಾ ಕಗ್ಟಿ ಮತ್ತು 'ರಿಯಲ್' ನಿರ್ದೇಶಕಿ ಸೋನಾ ಜೈನ್ ಕೂಡಾ ಮುಂದಿನ ಚಿತ್ರಗಳತ್ತ ಗಮನ ಹರಿಸಿದ್ದಾರೆ. ಇವರಿಂದ ಸ್ಫೂರ್ತಿ ಹೊಂದಿ ಇನ್ನಷ್ಟು ಹೊಸ ನಿರ್ದೇಶಕಿಯರು ಚಿತ್ರಕಥೆಯೊಂದಿಗೆ ಸಿದ್ಧರಾಗಿದ್ದಾರೆ.


ಕಿರಣ್ ರಾವ್


ಅನೂಷಾ ರಿಜ್ವಿ


ರಾಜಶ್ರೀ ಓಝಾ

ಒಟ್ಟಾರೆ ಬಾಲಿವುಡ್‌ನಲ್ಲೀಗ ಪ್ರಮೀಳಾ ಯುಗ!

ಹಾಗೆ ನೋಡಿದರೆ ಬಾಲಿವುಡ್‌ನ ಕಮರ್ಷಿಯಲ್ ಚಿತ್ರಗಳ ಲಾಬಿ ಮೇಲೆ ಮೊದಲ ಪ್ರಭಾವ ಬೀರಿದಾಕೆ ಫರ್ಹಾ ಖಾನ್. ಮೊದಲ ನಿರ್ದೇಶನದ ಚಿತ್ರದಲ್ಲೇ ಕಮರ್ಷಿಯಲ್ ಯಶಸ್ಸು ಕಂಡ ಫರ್ಹಾ, ಈಗ ಅಕ್ಷಯ್ ಕುಮಾರ್ ಅಭಿನಯದ 'ತೀಸ್ ಮಾರ್ ಖಾನ್' ನಿರ್ದೇಶಿಸುತ್ತಿದ್ದಾರೆ. ಶಬ್ದ್ ಮೂಲಕ ಸುದ್ದಿ ಮಾಡಿದ ಲೀನಾ ಯಾದವ್ ಅಮಿತಾಭ್ ಬಚ್ಚನ್ ಮತ್ತು ಬೆನ್ ಕಿಂಗ್ಸ್‌ಲೆ ಕಾಲ್‌ಶೀಟ್ ಪಡೆದು 'ತೀನ್ ಪತ್ತಿ' ನಿರ್ದೇಶಿಸಿದರು. ಈವರೆಗೆ ಮಹಿಳೆಯರು ಕಲಾತ್ಮಕ ಚಿತ್ರಗಳಿಗಷ್ಟೇ ಫಿಟ್ ಎಂದುಕೊಳ್ಳುತ್ತಿದ್ದವರೂ ಮೂಗಿಗೆ ಬೆರಳೇರಿಸುವಂತೆ ಮಹಿಳಾ ನಿರ್ದೇಶಕಿಯರ ಜಾಣ್ಮೆ ಎದ್ದು ಕಾಣುತ್ತಿದೆ.

■ ಬಿಂದು

Pure Kanchee Wedding Sarees Collections

samyakk™
eternally graceful

A unit of Mahaveer Salection
'D' Souza Circle, Richmond Road
Opp. Lifestyle, Bangalore - 560 025
Ph. : 080 41113330/41227442
Web. : www.samyakk.com

Sarees-Ghagras-Kanjivaram-Salwar Suits

Nakshatra

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65